**(**ಇಂದು ದಿನಾಂಕಃ ***08/01/2026*** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.**)**

**<u>ಮುಂದುವರೆದ ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಸ್.ವಿ.ಪಿ. (ಐ.ವಿ.ಪಿ.) ವಕೀಲರಿಂದಃ-</u>**

13. ನಾನು ಪಾರದರ್ಶಕ ವಿಚಾರಣೆ ನಡೆಸಿಲ್ಲ, ಕಾನೂನಿನ ನಿಯಮಗಳನ್ನು ಪಾಲಿಸಿಲ್ಲ ಮತ್ತು ನೈಸರ್ಗಿಕ ನ್ಯಾಯತತ್ವ ಪಾಲನೆ ಮಾಡಿಲ್ಲ ಎನ್ನುವುದು ಸುಳ್ಳು. ಅರ್ಜಿದಾರ ತನ್ನ ಸಹೋದ್ಯೋಗಿಯ ಸಹಾಯ ಪಡೆದು ಅರ್ಜಿ ಸಲ್ಲಿಸಿದಾಗ ನಾನು ಅನುಮತಿ ನೀಡಿಲ್ಲ ಎನ್ನುವುದು ಸುಳ್ಳು. ಸಾಕ್ಷಿದಾರರಿಗೆ ಪಾಟೀ ಸವಾಲು ಮಾಡಲು ಅರ್ಜಿದಾರರಿಗೆ ಅವಶ್ಯಕ ಅವಕಾಶ ನೀಡಿಲ್ಲ ಎನ್ನುವುದು ಸುಳ್ಳು. ಅರ್ಜಿದಾರರ ಸಾಕ್ಷಿ ವಿಚಾರಣೆ ಮಾಡಲು ನಾನು ಅವಕಾಶ ಕೊಟ್ಟಿಲ್ಲ ಎನ್ನುವುದು ಸುಳ್ಳು. ಅರ್ಜಿದಾರರ ಸಾಕ್ಷಿ ವಿಚಾರಣೆಗೆ ನಾನು ದಿನಾಂಕ ನಿಗದಿಪಡಿಸಿಲ್ಲ ಎನ್ನುವುದು ಸುಳ್ಳು. ದಿನಾಂಕ ನಿಗದಿಪಡಿಸಿರುವ ಕುರಿತು ನಾನು ಆರ್ಡರಶೀಟನಲ್ಲಿ ನಮೂದು ಮಾಡಿದ್ದೇನೆ. ಆ ರೀತಿ ನಾನು ನಮೂದು ಮಾಡಿಲ್ಲ ಎನ್ನುವುದು ಸುಳ್ಳು. ಅರ್ಜಿದಾರ ತನ್ನ ಸಂರಕ್ಷಣೆ ಹೇಳಿಕೆ ಸಲ್ಲಿಸಲು ನಾನು ಅವಕಾಶ ನೀಡಿಲ್ಲ ಎನ್ನುವುದು ಸುಳ್ಳು.

14. ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ದೋಷಾರೋಪಣೆ ಸಾಬೀತಾಗಿದೆಯೆಂದು ವರದಿ ಸಲ್ಲಿಸಿದ್ದೇನೆ ಎನ್ನುವುದು ಸುಳ್ಳು. ಅರ್ಜಿದಾರ ಬೇರೆ ವಿಚಾರಣಾಧಿಕಾರಿಯನ್ನು ನೇಮಿಸುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಆದುದರಿಂದ ಪಕ್ಷಪಾತತನ ತೋರಿದ್ದೇನೆ ಎನ್ನುವುದು ಸುಳ್ಳು.

**<u>ಮರು ವಿಚಾರಣೆಃ</u>** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.